# ಕರ್ನಾಟಕ ಸರ್ಕಾರದ ನಡವಳಿಗಳು.

ವಿಷಯ:- ಶ್ರೀ ಪ್ರಕಾಶ್ ಹಾಲಮ್ಮನವರ, ಹಿಂದಿನ (ಪ್ರಭಾರ) ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಕುಂದಗೋಳ, ಧಾರವಾಡ, ಜಿಲ್ಲೆ ಇವರ ವಿರುದ್ಧದ ಶಿಸ್ತು ಕ್ರಮ - ಅಂತಿಮ ಆದೇಶ.

ಓದಲಾಗಿದೆ:
1. ಸರ್ಕಾರದ ಕಾರಣ ಕೇಳುವ ನೋಟೀಸ್ ಸಂಖ್ಯೆ:ಗ್ರಾಅಪ 220 ವಿಸೇಬಿ 2014 ದಿ:10-10-2014.
2. ಶ್ರೀ ಪ್ರಕಾಶ್ ಹಾಲಮ್ಮನವರ, ಇವರ ಲಿಖಿತ ಹೇಳಿಕೆ ದಿ:14-11-2014.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಧಾರವಾಢ ಇವರ ಪತ್ರ ಸಂಖ್ಯೆ:ಧಾಜಿಪಂ/ಉಕಾ/ಸಿ-9/ಸಿಆರ್/2015-16/2056 ದಿನಾಂಕ:21-10-2015.
4. ಆಯುಕ್ತರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಹಾಗೂ ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ ಇವರ ಪತ್ರಸಂಖ್ಯೆ:RDP/05/RDW&SD/SBM/2015-16/ 233. ದಿ:28-10-2015.

----

ಪ್ರಸ್ತಾವನೆ:-

ಶ್ರೀ ಪ್ರಕಾಶ್ ಹಾಲಮ್ಮನವರ, ಇವರು ಈ ಹಿಂದೆ ಪ್ರಭಾರ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಕುಂದಗೋಳ, ಧಾರವಾಡ ಜಿಲ್ಲೆ, ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ನಿರ್ಮಲ ಭಾರತ್ ಅಭಿಯಾನ ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನದ ಸಂಬಂಧ ಈ ಕೆಳಕಂಡ ವಿಷಯಗಳಿಗೆ ಅನುಪಾಲನಾ ಕ್ರಮ ಕೈಗೊಳ್ಳಲು ವಿಫಲರಾಗಿ, ಮೇಲಾಧಿಕಾರಿಗಳ ಸೂಚನೆಗಳನ್ನು ಪಾಲಿಸದೆ ಜವಬ್ದಾರಿಯನ್ನು ನಿರ್ವಹಿಸಲು ಸಂಪೂರ್ಣ ವಿಫಲರಾಗಿ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ ನಿಯಮ 3(1), 3(2), ಮತ್ತು 3(2)(i) ಅನ್ನು ಉಲ್ಲಂಘಿಸಿ, ಎಸಗಿದ್ದಾರೆನ್ನಲಾದ ಕರ್ತವ್ಯಲೋಪ/ದುರ್ನಡತೆ ಆರೋಪಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 12(1) (ಎ) ರಡಿಯಲ್ಲಿ ಮೇಲೆ ಕ್ರಮ ಸಂಖ್ಯೆ (1) ರಲ್ಲಿ ಓದಲಾದ ದಿನಾಂಕ: 10-10-2014 ರಂದು ಕಾರಣ ಕೇಳುವ ನೋಟೀಸಿನೊಂದಿಗೆ ಕೆಳಗಿನಂತೆ ದೋಷಾರೋಪಣಾ ಪಟ್ಟಿಯನ್ನು ಜಾರಿ ಮಾಡಲಾಗಿತ್ತು.

1. ತಾಲೂಕಿನಲ್ಲಿ ಎನ್.ಬಿ.ಎ ಅನುಷ್ಠಾನ ಅಧಿಕಾರಿಯಾದ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಪ್ರತಿ 15 ದಿನಗಳಿಗೊಮ್ಮೆ ಎಲ್ಲಾ ಗ್ರಾಮ ಪಂಚಾಯಿತಿ ಪಿ.ಡಿ.ಓಗಳ ಸಭೆ ಕರೆದು, ಪ್ರಗತಿ ಪರಿಶೀಲನೆ ನಡೆಸಲು ತಿಳಿಸಲಾಗಿತ್ತು. ಆದರೆ ಈ ಬಗ್ಗೆ ಯಾವುದೇ ಕ್ರಮವಹಿಸದಿರುವುದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಹಾಗೂ ಎನ್.ಬಿ.ಎ ಅನುಷ್ಠಾನದಲ್ಲಿ ನಿಷ್ಕಾಳಜಿ ಹೊಂದಿರುವಿರಿ. ಹೀಗಾಗಿ ತಾಲ್ಲೂಕಿನಲ್ಲಿ ಪ್ರಗತಿಯ ಸಾಧನೆಯು ತೀವ್ರ ಕುಂಠಿತವಾಗಿರುತ್ತದೆ.

2. ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಯವರು ಪ್ರತಿ 15 ದಿನಕ್ಕೊಮ್ಮೆ ತಪ್ಪದೇ ಎನ್.ಬಿ.ಎ. ಪ್ರಗತಿ ಕುರಿತು ಸಭೆಯನ್ನು ನಡೆಸಿ, ನಡವಳಿಗಳನ್ನು ತಯಾರಿಸಿ ಜಾರಿಗೊಳಿಸಬೇಕಾಗಿದ್ದರೂ ಇದರ ಪಾಲನೆಯಲ್ಲಿ ವಿಫಲರಾಗಿರುತ್ತಾರೆ.

3. ಕರ್ನಾಟಕ ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮದ ಆದೇಶದಂತೆ ಎನ್.ಬಿ.ಎ.ಯಡಿ ಬೆಂಗಳೂರು ದಕ್ಷಿಣ ತಾಲೂಕಿನಲ್ಲಿ ಈ ವರ್ಗಕ್ಕೆ ನಿಗಧಿಪಡಿಸಿದ ಗುರಿಯನ್ನು ಸಾಧನೆ ಮಾಡಲು ವಿಫಲರಾಗಿರುವುದು.

4. 2014–15ನೇ ಸಾಲಿನಲ್ಲಿ ಗ್ರಾಅಪ/ರಾನೀನೈಮಿ/ನಿಭಾಅ/ಸುತ್ತೋಲೆ–22/ 2013–14/65, ದಿನಾಂಕ 13.05.2014 ರಂದು ಹೊರಡಿಸಿದ ಸುತ್ತೋಲೆಯಂತೆ ಕುಂದಗೋಳ ತಾಲ್ಲೂಕಿಗೆ ಒಟ್ಟು 5918 ವೈಯಕ್ತಿಕ ಗೃಹ ಶೌಚಾಲಯಗಳನ್ನು ನಿರ್ಮಾಣ ಮಾಡುವ ಗುರಿಯನ್ನು ನಿಗಧಿಪಡಿಸಿ, ಪ್ರಗತಿ ಸಾಧಿಸುವಂತೆ ಸೂಚಿಸಲಾಗಿತ್ತು, ಕಳೆದ ಏಪ್ರಿಲ್–2014 ರಿಂದ ಜುಲೈ–2014ರವರಗೆ ತಮ್ಮ ತಾಲ್ಲೂಕಿನ ಭೌತಿಕ ಗುರಿ 1973 ಆಗಿದ್ದು, ಈ ಪೈಕಿ 4 ತಿಂಗಳಲ್ಲಿ 427 ವೈಯಕ್ತಿಕ ಗೃಹ ಶೌಚಾಲಯಗಳನ್ನು ನಿರ್ಮಾಣ ಮಾಡಿದ್ದು, ಶೇ. 22% ರಷ್ಟು ಮಾತ್ರ ಪ್ರಗತಿಯನ್ನು ಸಾಧಿಸಲಾಗಿರುತ್ತದೆ. ಇದು ಅತ್ಯಂತ ಕಳಪೆ ಸಾಧನೆಯಾಗಿದ.

ಮೇಲೆ ಕ್ರಮಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: ದಿನಾಂಕ:14-11 –2014ರ ಪತ್ರದಲ್ಲಿ ಸದರಿ ನೋಟೀಸಿಗೆ ಶ್ರೀ ಪ್ರಕಾಶ್ ಹಾಲಮ್ಮನವರ, ಇವರು ಈ ಕೆಳಕಂಡಂತೆ ಲಿಖಿತ ರಕ್ಷಣಾ ಹೇಳಿಕೆಗಳನ್ನು ಸಲ್ಲಿಸಿರುತ್ತಾರೆ.

(1) ಕುಂದಗೋಳ ತಾಪಂ ಕಾನಿಅ ಆಗಿ ತಾವು 21 ಜುಲೈ 2014 ರಂದು ಪ್ರಭಾರ ವಹಿಸಿಕೊಂಡಿದ್ದು ನಂತರ ದಿನಾಂಕ 8–7–2014, 28–7–2014, 11–8–2014, 25–8–2014, 1–9–2014, 6–9–2014, 22–9–2014, 10–10–2014, ಮತ್ತು 18–10–2014 ಹೀಗೆ ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಕಾರ್ಯದರ್ಶಿಗಳು ಮತ್ತು ತಾಂತ್ರಿಕ ಸಹಾಯಕರುಗಳ ಸಭೆಗಳನ್ನು ಕರೆದು ಪರಿಶೀಲನೆ ಮಾಡಿ ಯೋಜನೆಯ ಪ್ರಗತಿ ಸಾಧನೆ ಕುರಿತು ಕ್ರಮವಹಿಸಲಾಗಿದೆ. ಏಪ್ರಿಲ್ 2014 ರಿಂದ ಜುಳಯ 2014 ರವರೆಗೆ ಸಾಧನೆ ಕುಂಠಿತಗೊಳ್ಳಲು ತಾವು ವಿಫಲರಾಗಿರುವುದಿಲ್ಲ. ಜಿ.ಪಂ. ಮೇಲಾಧಿಕಾರಿಗಳ ನಿರ್ದೇಶನದಂತೆ ತಾವು ಜುಲೈ 2014 ರಿಂದ ಇಲ್ಲಿಯವರೆಗೆ ಎನ್.ಬಿ.ಎ. ಕಾರ್ಯಕ್ರಮವನ್ನು ಪರಿಣಾಮಕಾರಿ ಅನುಷ್ಠಾನದ ಸಂಬಂಧವಾಗಿ ತೀವ್ರಗತಿಯ ಕ್ರಮುವನ್ನು ಕೈಗೊಂಡಿರುತ್ತಾರೆಂದು ;

(2) ಕುಂದಗೋಳ ತಾಲ್ಲೂಕಿಗೆ 5918 ವೈಯಕ್ತಿಕ ಶೌಚಾಲಯಗಳ ಗುರಿ ನಿಗದಿಪಡಿಸಿದ್ದು, ಇದರಲ್ಲಿ ಪ್ರಗತಿ ಸಾಧಿಸಲು ಗ್ರಾಮ ಪಂಚಾಯತ್‌ವಾರು ಗುರಿಯನ್ನು ನಿಗದಿಪಡಿಸಿ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಹಾಗೂ ಚುನಾಯಿತ ಪ್ರತಿನಿಧಿಗಳಿಗೆ ಸಭೆ ಜರುಗಿಸಿ ನಡವಳಿಗಳನ್ನು ಮಾಡಲಾಗಿದೆ;

(3) ಕುಂದಗೋಳ ತಾಲ್ಲೂಕಿಗೆ ಒಟ್ಟಾರೆ 5918 ವೈಯಕ್ತಿಕ ಶೌಚಾಲಯಗಳ ಗುರಿ ನಿಗದಿಪಡಿಸಿದ್ದು, ಇದರಲ್ಲಿ ಎಸ್.ಇ. 112 ಹಾಗೂ ಎಸ್.ಟಿ. 86 ಜನಾಂಗದವರಿಗೆ ಶೌಚಾಲಯಗಳನ್ನು ನಿರ್ಮಿಸಲಾಗಿದೆ;

(4) ಏಪ್ರಿಲ್ 2014 ರಿಂದ ಜುಲೈ 2014 ರವರೆಗೆ ಪ್ರಗತಿ ತುಂಬಾ ಕಡಿಮೆ ಇರುವುದನ್ನು ಗಮನಿಸಿ ತಾವು ಕಾನಿಅ ಆಗಿ ಪ್ರಭಾರ ವಹಿಸಿಕೊಂಡ ನಂತರ ಅಂದರೆ ಜುಲೈ 21–7–2014 ರಿಂದ ಇಲ್ಲಿಯವರೆಗೆ ಒಟ್ಟು 1071 ಶೌಚಾಲಯ ನಿರ್ಮಿಸಲಾಗಿದೆ. ತಾಲ್ಲೂಕಿನಾದ್ಯಂತ 3372 ಅರ್ಜಿಗಳನ್ನು ಸ್ವೀಕರಿಸಿದ್ದು, ಅದರಲ್ಲಿ 2780 ಶೌಚಾಲಯ ಕಟ್ಟಿಕೊಳ್ಳಲು ಕಾಮಗಾರಿ ಆದೇಶ ನೀಡಲಾಗಿದೆ. ಈ ಕುರಿತು ಸ್ವಚ್ಛ ಭಾರತ ಅಭಿಯಾನದಲ್ಲಿ ಪ್ರತಿಯೊಂದು ಗ್ರಾಮದಲ್ಲಿ

ಸಾರ್ವಜನಿಕರನ್ನು ಸಂಪರ್ಕಿಸಿ ಶೌಚಾಲಯ ಕಟ್ಟಿಸಿಕೊಳ್ಳಲು ಮನವೊಲಿಸಿ ಸುಮಾರು 15 ವಿವಿಧ ಹಂತದ ಕಾರ್ಯಕ್ರಮಗಳನ್ನು ಐ.ಇ.ಸಿ. ಚಟುವಟಿಕೆಗಳ ಮುಖಾಂತರ ಹಮ್ಮಿಕೊಳ್ಳಲಾಗಿರುತ್ತದೆ.

ಮೇಲೆ ಓದಲಾದ ಕ್ರಮಸಂಖ್ಯೆ (03)ರ ದಿ:21-10-2015ರಂದು ಮುಕಾನಿಅ, ಜಿಪಂ, ಧಾರವಾಡ, ಇವರು ಆಯುಕ್ತರು, ಗ್ರಾ.ನೀ.ಸ&ನೈ.ಇಲಾಖೆ ಹಾಗೂ ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ, ಬೆಂಗಳೂರು ಇವರಿಗೆ ಬರೆದಿರುವ ಪತ್ರದಲ್ಲಿ, ಆಪಾದಿತ ಅಧಿಕಾರಿಯು ನಿರ್ಮಲ ಭಾರತ್ ಅಭಿಯಾನ ಕಾರ್ಯಕ್ರಮದ ಅನುಷ್ಠಾನದ ಬಗ್ಗೆ ಕೈಗೊಂಡ ಅನುಪಾಲನಾ ಕರ್ತವ್ಯಗಳ ಬಗ್ಗೆ ಪರಿಶೀಲಿಸಿ ಈ ಕೆಳಕಂಡ ಅಂಶಗಳನ್ನು ಸಲ್ಲಿಸಿದ್ದಾರೆ.

(1) ಶ್ರೀ ಪ್ರಕಾಶ್ ಹಾಲಮ್ಮನವರ, ಇವರು ಕುಂದಗೋಳ ತಾ.ಪಂ.ಯಲ್ಲಿ ದಿನಾಂಕ 21-7-2014 ರಿಂದ 24-7-2015 ರವರೆಗೆ ಪ್ರಭಾರ ಕಾನಿಅ ಆಗಿ ಕರ್ತವ್ಯ ನಿರ್ವಹಿಸಿದ್ದಾರೆ.

(2) ಸದರಿ ಅವಧಿಯಲ್ಲಿ ಎನ್.ಬಿ.ಎ. ಅನುಷ್ಠಾನದ ಬಗ್ಗೆ ಪ್ರಗತಿ ಪರಿಶೀಲನಾ ಸಭೆಗಳನ್ನು ದಿನಾಂಕ28-7-2014,11-8-2014, 25-8-2014, 1-9-2014, 6-9-2014, 1-10-2014, 10-10-2014, 18-10,2014 11-12-2014, 29-12-2014, 21-1-2015, 30-1-2015, 11-2-2015, 9-4-2015 ಹಾಗೂ 18-6-2015 ರಂದು ನಡೆಸಿ ಪ್ರಗತಿ ಸಾಧಿಸಲು ಕ್ರಮವಹಿಸಿರುತ್ತಾರೆ.

(3) 2014-15ನೇ ಸಾಲಿನಲ್ಲಿ ಗ್ರಾಅಪ/ರಾನೀನೈಮಿ/ನಿಭಾಅ/ಸುತ್ತೋಲೆ-22/2013-14/65, ದಿನಾಂಕ 13.05.2014 ರಂದು ಹೊರಡಿಸಿದ ಸುತ್ತೋಲೆಯಂತೆ ಕುಂದಗೋಳ ತಾಲ್ಲೂಕಿಗೆ ಒಟ್ಟು 5918 ವೈಯಕ್ತಿಕ ಗೃಹ ಶೌಚಾಲಯಗಳನ್ನು ನಿರ್ಮಾಣ ಮಾಡುವ ಗುರಿಯನ್ನು ನಿಗದಿಪಡಿಸಿ, ಪ್ರಗತಿ ಸಾಧಿಸುವಂತೆ ಸೂಚಿಸಲಾಗಿತ್ತು, ಅವರು ದಿನಾಂಕ 21-7-2014 ರಂದು ಪ್ರಭಾರ ಕಾನಿಅ ಆಗಿ ಸೇವೆಗೆ ಸೇರಿದ ನಂತರ ತಮ್ಮ ತಾಲ್ಲೂಕಿನ ಸಾಧನೆಯನ್ನು ಉತ್ತಮಗೊಳಿಸಿ ಇಲ್ಲಿಯವರೆಗೆ 2,090 ಶೌಚಾಲಯಗಳನ್ನು ನಿರ್ಮಾಣ ಮಾಡಿದ್ದು, ಒಟ್ಟು 1,325 ಶೌಚಾಲಯಗಳನ್ನು ಎಂ.ಐ.ಎಸ್. ನಲ್ಲಿ ಅಳವಡಿಸಲಾಗಿದೆ.ಹಾಗೂ ತಾಲ್ಲೂಕಿನ ಭೌತಿಕ ಗುರಿಯು ಜನವರಿ ತಿಂಗಳವರೆಗೆ 4849 ಇದ್ದು, ಶೇ. 43.10ರಷ್ಟು ಪ್ರಗತಿಯನ್ನು ಸಾಧಿಸಿದ್ದಾರೆ.

ಮೇಲೆ ಓದಲಾದ ಕ್ರಮಸಂಖ್ಯೆ (04)ರ ದಿ:21-10-2015ರಂದು ಆಯುಕ್ತರು, ಗ್ರಾಕುನೀಸ & ನೈ.ಇಲಾಖೆ ಹಾಗೂ ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ, ಬೆಂಗಳೂರು ಇವರು ಆಪಾದಿತ ಅಧಿಕಾರಿಯು 2014-15 ನೇ ಸಾಲಿನಲ್ಲಿ ಕುಂದಗೋಳ ತಾಲ್ಲೂಕಿನಲ್ಲಿ 5918 ವೈಯಕ್ತಿಕ ಗೃಹ ಶೌಚಾಲಯಗಳನ್ನು ನಿರ್ಮಾಣ ಮಾಡುವ ಗುರಿ ಇದ್ದು, ಈ ಪೈಕಿ ಮಾರ್ಚ್ 2015 ಅಂತ್ಯಕ್ಕೆ 2340 ಶೌಚಾಲಯಗಳನ್ನು ನಿರ್ಮಿಸಿ ಶೇ. 40.10 ರಷ್ಟು ಪ್ರಗತಿ ಸಾಧಿಸಿದ್ದು ಇವರ ವಿರುದ್ಧದ ದೋಷಾರೋಪಣೆಯನ್ನು ಕೈಬಿಡಬಹುದೆಂದು ಶಿಫಾರಸ್ಸು ಮಾಡಿರುತ್ತಾರೆ.

ಆಪಾದಿತರ ವಿರುದ್ಧದ ಆರೋಪಗಳು ಮತ್ತು ಅವರು ಸಲ್ಲಿಸಿರುವ ಲಿಖಿತ ರಕ್ಷಣಾ ಹೇಳಿಕೆಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೆಂಗಳೂರು ನಗರ ಮತ್ತು ಆಯುಕ್ತರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಹಾಗೂ ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ ಇವರ ವರದಿಯನ್ನು ಕೂಲಂಕಷವಾಗಿ ಪರಿಶೀಲಿಸಿ. ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 277 ವಿಸೇಬಿ 2015 ಬೆಂಗಳೂರು ದಿನಾಂಕ:26-11-2015.

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಸರ್ಕಾರವು ಶ್ರೀ ಪ್ರಕಾಶ್ ಹಾಲಮ್ಮನವರ, ಹಿಂದಿನ ಪ್ರಭಾರ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಕುಂದಗೋಳ, ಧಾರವಾಡ ಜಿಲ್ಲೆ, ಪ್ರಸ್ತುತ ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) ಕುಂದಗೋಳ, ಧಾರವಾಡ ಜಿಲ್ಲೆ, ಇವರಿಗೆ ದಿನಾಂಕ 10-10-2014ರ ಕಾರಣ ಕೇಳುವ ನೋಟೀಸಿನಲ್ಲಿ ಮಾಡಿರುವ ಆರೋಪಗಳಿಗೆ ಸಂಬಂಧಿಸಿದಂತೆ, ಇನ್ನು ಮುಂದೆ ಸರ್ಕಾರದ ಯೋಜನೆ / ಕಾರ್ಯಕ್ರಮಗಳಲ್ಲಿ ನಿಗದಿಪಡಿಸಿರುವ ಗುರಿಯನ್ನು ನಿಗದಿತ ಸಮಯದಲ್ಲಿ ಅನುಷ್ಠಾನಗೊಳಿಸುವಂತೆ ಹಾಗೂ ಕರ್ತವ್ಯಲೋಪಕ್ಕೆ ಅವಕಾಶ ಕೊಡದಂತೆ ಜಾಗರೂಕತೆಯಿಂದ ಕರ್ತವ್ಯ ನಿರ್ವಹಿಸಲು ಸೂಚಿಸಿ, ಪ್ರಕರಣವನ್ನು ಮುಕ್ತಾಯಗೊಳಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ವಿ. ಹನುಮಂತಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇ-ಬಿ & ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಆಯುಕ್ತರು , ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಹಾಗೂ ಪದನಿಮಿತ್ತ ಸರ್ಕಾರದ ಅಪರ ಕಾರ್ಯದರ್ಶಿ, ಕಾವೇರಿಭವನ ಬೆಂಗಳೂರು.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಧಾರವಾಡ.
4. ಶ್ರೀ ಪ್ರಕಾಶ್ ಹಾಲಮ್ಮನವರ, ಹಿಂದಿನ ಪ್ರಭಾರ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಕುಂದಗೋಳ, ಧಾರವಾಡ ಜಿಲ್ಲೆ, ಪ್ರಸ್ತುತ ಸಹಾಯಕ ನಿರ್ದೇಶಕರು (ಗ್ರಾಮೀಣ ಉದ್ಯೋಗ) ಕುಂದಗೋಳ, ಧಾರವಾಡ ಜಿಲ್ಲೆ,

ಪ್ರತಿಯನ್ನು ಮಾಹಿತಿಗಾಗಿ:-

1) ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)/ ಉಪ ಕಾರ್ಯದರ್ಶಿ (ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಆಪ್ತ ಶಾಖೆಗೆ.
2) ವಿಶೇಷಾಧಿಕಾರಿ, ಗಣಕ ಕೋಶ, ಗ್ರಾ.ಅ.ಪಂ.ರಾಜ್ ಇಲಾಖೆ.
3) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

GO